## ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು

## ಎಸ್.ಸಿ ನಂ. 15/2021

ಫಿರ್ಯಾದುದಾರರುಃ ರಾಜ್ಯದ ಪರವಾಗಿ ಕವಲಂದೆ ಪೊಲೀಸರು
ಮೈಸೂರು.

ವಿರುದ್ಧ

ಆರೋಪಿ ನಂ.1: ಮಂಜುನಾಥ

## ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರ ಪ್ರಕಾರ ಆರೋಪಿಯ ಮುಂದುವರೆದ ಹೇಳಿಕೆ

1. ಪ್ರಾಸಾ.15 ಡಾಃ ಮೋಹನ್, ಪ್ಲಾಸ್ಟಿಕ್ ಸರ್ಜರಿಯಲ್ಲಿ ಪ್ರೊಫೆಸರ್, ಮೈಸೂರು ಮೆಡಿಕಲ್ ಕಾಲೇಜ್, ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ18.06.2020 ರಂದು ತಾವು ಗಾಯಾಳು ಮಹೇಂದ್ರರವರನ್ನು ಪರೀಕ್ಷಿಸಿದಾಗ ಅವರ ಮುಖದ ನರಕ್ಕೆ ಮತ್ತು ಎಕ್ಸ್‌ಟೆನ್ಸರ್ ಸ್ನಾಯುರಜ್ಜುಗೆ ಗಾಯವಾಗಿರುವುದು ಕಂಡುಬಂದಿದ್ದು ಅವರನ್ನು ಪ್ಲಾಸ್ಟಿಕ್ ಸರ್ಜರಿ ಘಟಕಕ್ಕೆ ಸ್ಥಳಾಂತರಿಸಲಾಯಿತು ಎಂಬುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ?

   ಆರೋಪಿಯ ಉತ್ತರಃ

2. ಪ್ರಾಸಾ.15 ರವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ದಿನಾಂಕಃ22.06.2020 ಹಾಗೂ ದಿಃ25.06.2020 ರಂದು ಗಾಯಾಳುವಿಗೆ ಶಸ್ತ್ರಚಿಕಿತ್ಸೆ ಮಾಡಲಾಯಿತು. ಅವರು ದಿನಾಂಕಃ30.06.2020 ರಂದು ಆಸ್ಪತ್ರೆಯಿಂದ ಬಿಡುಗಡೆ ಹೊಂದಿದ್ದು, ನಂಜನಗೂಡು ಸರ್ಕಾರಿ ಆಸ್ಪತ್ರೆಯ ವೈದ್ಯರಾದ ಸುಮರವರು ಗಾಯದ ಪ್ರಮಾಣ ಪತ್ರವನ್ನು ನೀಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ?

   ಆರೋಪಿಯ ಉತ್ತರಃ

3. ಈ ಕೇಸಿನ ಬಗ್ಗೆ ನ್ಯಾಯಾಲಯಕ್ಕೆ, ನೀವು ಹೆಚ್ಚಿಗೆ ಏನಾದರೂ ಹೇಳಲು ಬಯಸುವಿರಾ?

   ಆರೋಪಿಯ ಉತ್ತರಃ

4. ನಿಮ್ಮ ಪರ ವಿಚಾರಣೆ ಮಾಡಲು ಸಾಕ್ಷಿಗಳೇನಾದರೂ ಇದ್ದಾರೆಯೇ?

ಆರೋಪಿಯ ಉತ್ತರಃ

(ಮೇಲಿನ ಹೇಳಿಕೆಗಳನ್ನು ಆರೋಪಿಗೆ ತಿಳಿಯುವ ಕನ್ನಡ ಭಾಷೆಯಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಿ, ಓದಿ ಹೇಳಿ, ನಂತರ ಆರೋಪಿಯು ಉತ್ತರಿಸಿದ ಭಾಷೆಯಲ್ಲಿಯೇ ನನ್ನ ಸಮಕ್ಷಮದಲ್ಲಿ ಕೇಳಿ ಬರೆದುಕೊಳ್ಳಲಾಯಿತೆಂದು ದೃಢೀಕರಿಸುತ್ತೇನೆ.)

ದಿನಾಂಕಃ **24.07.2025**

(ಉಷಾರಾಣಿ )
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು.

ಆರೋಪಿಯ ಸಹಿಃ